**ನೂಪುರ ಭ್ರಮರಿ (ರಿ.) IKS Centre– ನೃತ್ಯಶಿಲ್ಪಯಾತ್ರೆಯ ಅಂಗಭಾಗವಾದ ಲೇಖನವಾಗಿ ಪ್ರಕಟವಾಗಿದೆ.**
**ಮೇ- ಜೂನ್ 2022**

# <u>ದೇವಾಲಯವೆಂಬ ಮಹಾನ್ ಕಲೆಯೊಳಗೆ ಶಿಲ್ಪಿಯ ಕಥನಕಲೆ</u>

– ರೋಹಿಣಿ ಮಂಜುನಾಥ್, ಬೆಂಗಳೂರು.



ಕಥೆ ಹೇಳುವ ಪರಂಪರೆ, ನಮ್ಮ ಸಂಸ್ಕೃತಿಯನ್ನು ಉಳಿಸುವ ಹಾಗು ಮುಂದಿನ ಪೀಳಿಗೆಗೆ ವರ್ಗಾಯಿಸುವ ಮಾರ್ಗವಾಗಿದೆ. ಇದು ಮೌಖಿಕವಾಗಿ, ಅಥವಾ ಬೊಂಬೆಯಾಟ, ಚಿತ್ರಕಲೆ, ನೃತ್ಯ, ಗಾಯನ ಮತ್ತು ಶಿಲ್ಪಕಲೆ ಮುಂತಾದ ಕಲಾಪ್ರದರ್ಶನಗಳ ಮೂಲಕ ತಲೆತಲಾಂತರದಿಂದ ನಡೆದುಬಂದಿದೆ. ಇದರಲ್ಲಿ ಶಿಲ್ಪಕಲೆಯು ಇತಿಹಾಸಪೂರ್ವದಿಂದಲೂ ಕಲೆಯ ಅತಿ ಮುಖ್ಯ ಅಭಿವ್ಯಕ್ತಿಯ ಮಾಧ್ಯಮವಾಗಿದೆ. ಇಂತಹ ಅದ್ಭುತ ಕಲಾ ಪ್ರಪಂಚವನ್ನು ನೋಡುವ ಅವಕಾಶ ನನಗೆ ಒದಗಿ ಬಂದದ್ದು ನೂಪುರ ಭ್ರಮರಿಯ ನೃತ್ಯಶಿಲ್ಪ ಯಾತ್ರೆಯಿಂದ ಹಾಗೂ ಸ್ಫೂರ್ತಿ ಯಾದದ್ದು ಬೆಂಗಳೂರಿನ ಅತಿ ಪ್ರಾಚೀನವಾದ ದೇಗುಲಗಳಲ್ಲಿ ಒಂದಾದ ಹಲಸೂರಿನ ಸೋಮೇಶ್ವರ ದೇವಸ್ಥಾನ. ಈ ಲೇಖನದ ಮೂಲಕ ಈ ದೇವಾಲಯದ ಕೆಲವು ಶಿಲ್ಪಗಳನ್ನು ಪರಿಚಯಿಸುವ ನಿಟ್ಟಿನಲ್ಲಿ ನನ್ನದೊಂದು ಕಿರು ಪ್ರಯತ್ನ.

ದ್ರಾವಿಡ ಶೈಲಿಯಲ್ಲಿ ನಿರ್ಮಿಸಲಾಗಿರುವ ಈ ದೇವಸ್ಥಾನದ ಒಂದೊಂದು ಶಿಲ್ಪಗಳು ರೋಮಾಂಚನ ಗೊಳಿಸುವ ಅತ್ಯದ್ಭುತವಾದ ಕಲಾಕೌಶಲದ ಪರಿಚಯಮಾಡಿಕೊಡುತ್ತವೆ. ಪುರಾಣಗಳಿಂದ ಆಯ್ದ ಹಲವಾರು ಕಥಾಪ್ರಸಂಗಗಳ ಇತಿಹಾಸ ಹಾಗೂ ಅಂದಿನ ಕಾಲದ ಜೀವನ ಶೈಲಿಯ ಬಗ್ಗೆ ತಿಳಿಸುವುದಲ್ಲದೇ ನಮ್ಮ ಶ್ರೀಮಂತ ಸಂಸ್ಕೃತಿ ಹೇಗಿತ್ತೆಂಬುದನ್ನು ಬಿಂಬಿಸುವ ಕಲೆಯ ಆಗರವಾಗಿದೆ. ಇಲ್ಲಿನ ಶಿಲ್ಪಗಳು ಗತವೈಭವವನ್ನು ಸಾರುತ್ತದೆ.



ಸುಮಾರು 1000 ವರುಷಗಳ ಇತಿಹಾಸ ಹೊಂದಿರುವ ಈ ಶಿವನ ಆಲಯವು ಮಾಂಡವ್ಯ ಋಷಿಗಳು ಪೂಜಿಸಿ, ತಪಃ ಗೈದ ಸ್ಥಳವಾಗಿದೆ. ಈ ಪ್ರದೇಶವು ಹಲಸು ಮರಗಳಿಂದ ಕೂಡಿದ್ದರಿಂದ ಈ ಸ್ಥಳ ಹಲಸೂರು ಎಂಬ ಹೆಸರನ್ನು ಪಡೆದುಕೊಂಡಿದೆ. **ಹಲಸಿನ ಹಣ್ಣನು ಹೊತ್ತಿರುವ ಈ ಗಣವು ಹಲಸೂರಿಗೆ ಸಂಕೇತವಾಗಿದ್ದಿರಬಹುದು ಎನ್ನುವುದು ನನ್ನ ಅಭಿಪ್ರಾಯ.**

**ನೂಪುರ ಭ್ರಮರಿ (ರಿ.) IKS Centre– ನೃತ್ಯಶಿಲ್ಪಯಾತ್ರೆಯ ಅಂಗಭಾಗವಾದ ಲೇಖನವಾಗಿ ಪ್ರಕಟವಾಗಿದೆ.**
**ಮೇ- ಜೂನ್ 2022**

ಇಲ್ಲಿನ ಗರ್ಭಗೃಹವು ಚೋಳರ ಕಾಲದ್ದಾಗಿದ್ದು ಇದನ್ನು 11ನೇ ಶತಮಾನದಲ್ಲಿ ನಿರ್ಮಿಸಲಾಗಿದೆ ಎಂದು ನಂಬಲಾಗಿದೆ. ಉಳಿದ ವಾಸ್ತುಶಿಲ್ಪ ವಿಜಯನಗರ ಅರಸರ ಕಾಲದಲ್ಲಿ ಮಾಡಲಾಗಿದ್ದು ಇದಕ್ಕೆ ಪುರಾವೆಯಾಗಿ ವಿಜಯನಗರ ಸಾಮ್ರಾಜ್ಯದ ಲಾಂಛನ ವಾದ ಗಂಡಭೇರುಂಡವನ್ನು ಇಲ್ಲಿಯ ಕಂಬದಲ್ಲಿ ಕಾಣಬಹುದು. 16ನೇ ಶತಮಾನದಲ್ಲಿ ವಿಜಯನಗರದ ಅರಸರು ಹಲಸೂರನ್ನು ಹಿರಿಯ ಕೆಂಪೇಗೌಡರಿಗೆ ಬಳುವಳಿಯಾಗಿ ನೀಡಿದ್ದಾಗಿ , ಕೆಂಪೇಗೌಡರ ಆಳ್ವಿಕೆಯಲ್ಲಿ ದೇವಾಲಯದ ಜೀರ್ಣೋದ್ಧಾರವಾಗಿತ್ತೆಂಬುದು ಇತಿಹಾಸಜ್ಞರ ಅಭಿಪ್ರಾಯ. ಇತ್ತೀಚಿನ ದಿನಗಳಲ್ಲಿ ನಡೆದ ದುರಸ್ತಿ ಕೆಲಸದಲ್ಲಿ ಸಿಕ್ಕಿದ ಶಿಲ್ಪಗಳ ಆಧಾರದ ಮೇಲೆ ಪ್ರಸಿದ್ಧ ಇತಿಹಾಸಕಾರ ಮತ್ತು ಶಾಸನಶಾಸ್ತ್ರಜ್ಞರಾದ ಎಚ್ ಎಸ್ ಗೋಪಾಲ ರಾವ್ ರವರು ಈ ಶೈಲಿಯು 7ನೇ ಮತ್ತು 9ನೇ ಶತಮಾನದ ನಡುವಿನ ಗಂಗರ ಕಾಲದ್ದು ಎಂದು ದೃಢಪಡಿಸಿದ್ದಾರೆ.

ಈ ದೇವಾಲಯದ ಮುಖ ಮಂಟಪವನ್ನು ನೋಡಿದ ಕೂಡಲೆ ಯಾವುದೋ ಬೇರೆ ಲೋಕಕ್ಕೆ ಹೋದಂತೆ ಭಾಸವಾಗುತ್ತದೆ. ಈ ಜೀವಂತ ದೇವಾಲಯದ ಕಂಪನ ನಮ್ಮ ತನುಮನಗಳನ್ನು ಆವರಿಸಿದಂತಾಗುತ್ತದೆ . ಇಲ್ಲಿನ ಮೂಲ ದೇವರು ಸೋಮೇಶ್ವರ. ಗರ್ಭಗುಡಿಯ ಎದುರಿರುವ ಅಂತರಾಳದ ಕಂಬಗಳಲ್ಲೂ ಶಿಲ್ಪಗಳ ಕೆತ್ತನೆ ಇವೆ. ಶಿವನ ಮುಂದೆ ನಂದಿಯು ವಿರಾಜಮಾನನಾಗಿದ್ದಾನೆ.

ಗರ್ಭಗುಡಿಯ ಪ್ರಾಕಾರದಲ್ಲಿ ಮಾಂಡವ್ಯ ಮಹರ್ಷಿಗಳು, ಮಹಾನ್ ಶೈವ ಸಂತರಾದ ತಿರುಜ್ಞಾನ ಸಂಬಂಧರ್, ತಿರುನಾವುಕ್ಕರಸರ್, ಸುಂದರರ್, ಮಾಣಿಕವಾಸಗರ್ ಮೊದಲಾದ 63 ನಾಯನ್ಮಾರ್ ಮುನಿಗಳ ಶಿಲ್ಪಗಳು ಕಂಡುಬರುತ್ತವೆ.

ಶಿವನ ಹಾಗು ಅವನ ಭಕ್ತರ ಕಥನಗಳು ಸಾಲು ಸಾಲಾಗಿ ಕಟ್ಟಲ್ಪಟ್ಟಿದೆ. ಶಿವನ ಪರಮ ಭಕ್ತನಾದ ಬೇಡರ ಕಣ್ಣಪ್ಪ ತನ್ನ ಕಣ್ಣುಗಳನ್ನು ಶಿವನಿಗೆ ಕೊಡುವ ಕೆತ್ತನೆ ಯನ್ನು ಅಂತರಾಳದ ಕಂಬದಲ್ಲಿ ಕಾಣಬಹುದು. ಇಲ್ಲಿಯ ಮುಖ ಮಂಟಪದ ಭಿತ್ತಿಯಲ್ಲಿ ಕಿರಾತಾರ್ಜುನಕಥೆ ವರ್ಣನೆ ಇದೆ





ಮಹಾಭಾರತದ ಅರಣ್ಯ ಪರ್ವದಲ್ಲಿ ಬರುವ ಸನ್ನಿವೇಶವನ್ನು ಅತಿ ಸರಳ ರೀತಿಯಲ್ಲಿ ಅರ್ಥವಾಗುವಂತೆ ಕೆತ್ತಲಾಗಿದೆ. ಮಧ್ಯಮ ಪಾಂಡವನಾದ ಅರ್ಜುನನು ಶಿವನನ್ನು ಕುರಿತು ತಪಸ್ಸು ಮಾಡುವುದು, ಕಾಡುಹಂದಿಯ ರೂಪವಾದ ಮೂಕ ಎಂಬ ರಾಕ್ಷಸನು ಅರ್ಜುನನ ಕಡೆಗೆ ಆಕ್ರಮಣ ಮಾಡುವುದು, ಶಿವನು ಕಿರಾತನ ರೂಪದಲ್ಲಿ ಕಾಣಿಸಿಕೊಂಡು ಅರ್ಜುನ ಮತ್ತು ಕಿರಾತರು ಹಂದಿಯ ಮೇಲೆ ಏಕಕಾಲದಲ್ಲಿ ಬಾಣವನ್ನು ಹೊಡೆದು ಕೊಲ್ಲುವುದು,

ಅವರಿಬ್ಬರ ನಡುವಿನ ವಾದ, ನಂತರದ ಯುದ್ದ ನಡೆಯುವುದನ್ನು ಇಲ್ಲಿ ಕಾಣಬಹುದು. ಅಂತಿಮವಾಗಿ, ಅವನು ದೇವರನ್ನು ಗುರುತಿಸಿ ಅವನಿಗೆ ಶರಣಾಗುವುದು, ಅವನ ಶೌರ್ಯಕ್ಕೆ ಮೆಚ್ಚಿದ ಶಿವನು ಅವನಿಗೆ ಪಾಶುಪತಾಸ್ತ್ರವನ್ನು ಕರುಣಿಸುವ ಕೆತ್ತನೆ ನಯನ ಮನೋಹರವಾಗಿದೆ.





ಗರ್ಭಗುಡಿಯ ಪ್ರವೇಶದ್ವಾರದ ಇಬ್ಬದಿಯಲ್ಲೂ ಪುರಾಣದ ಶಿಲ್ಪಗಳಿದ್ದು ಒಂದೆಡೆ ರಾಮಾಯಣದ ಉತ್ತರಖಂಡದಲ್ಲಿ ವರ್ಣಿಸಿರುವಂತೆ ಕೈಲಾಸ ಪರ್ವತವನ್ನು ಎತ್ತಿರುವ ರಾವಣ ಇದ್ದರೆ ಇನ್ನೊಂದೆಡೆ ದೇವಿ ಮಾಹಾತ್ಮ್ಯದ ಮಹಿಷಾಸುರಮರ್ದಿನಿಯ ಸೂಕ್ಷ್ಮವಾದ ಕೆತ್ತನೆಯನ್ನು ಕಾಣಬಹುದು.

ಮುಖಮಂಟಪದ 48 ಸ್ತಂಭಗಳಲ್ಲಿ ವಾದ್ಯದವರಿಂದ ಕೂಡಿದ ನೃತ್ಯಶಿಲ್ಪಗಳು, ವಿಜಯನಗರ ಕಾಲದ ದೇಶೀನೃತ್ಯ ಸಂಪ್ರದಾಯವನ್ನು ಬಿಂಬಿಸುತ್ತಿದೆ. ವಿಜಯನಗರ ಅರಸರ ಕಾಲದಲ್ಲಿ ಸಮುದಾಯ ನೃತ್ಯವನ್ನು ಪರಿಚಯಿಸಿ ಪ್ರೋತ್ಸಾಹಿಸಿದರೆಂಬುದು ಕಂಡುಬರುತ್ತದೆ.



**ನೂಪುರ ಭ್ರಮರಿ (ರಿ.) IKS Centre– ನೃತ್ಯಶಿಲ್ಪಯಾತ್ರೆಯ ಅಂಗಭಾಗವಾದ ಲೇಖನವಾಗಿ ಪ್ರಕಟವಾಗಿದೆ.**
**ಮೇ- ಜೂನ್ 2022**

ಇವುಗಳನ್ನು ನೋಡುವಾಗಲೇ "ಶಿವನ ಸಮ್ಮುಖದಲ್ಲಿರಲು,


ಶಿಲ್ಪಗಳ ಸ್ಫೂರ್ತಿ ಇರಲು,

ನೃತ್ಯದ ವಾತಾವರಣವಿರಲು,

ಸ್ವರ್ಗಕ್ಕೆ ಕಿಚ್ಚು ಹಚ್ಚೆಂದ ಸರ್ವಜ್ಞ"

– ಎಂಬುದಾಗಿ ವಚನವನ್ನು ನನ್ನ ಭಾವಕ್ಕೆ ಒಗ್ಗುವ ಹಾಗೆ ಬದಲಾಯಿಸುವುದು ಸೂಕ್ತವೆಂದು ನನಗೆ ಅನಿಸಿತು.

ವಿಷ್ಣುವಿನ ಅವತಾರಗಳು, ಪರಮೇಶ್ವರ, ಋಷಿ ಮುನಿಗಳು, ದೇವತೆಗಳು, ಕಿನ್ನರಿ, ಜನಸಾಮಾನ್ಯರು ಹಾಗು ಅವರ ಕಸುಬು, ಪ್ರಾಣಿಗಳು, ಈ ಕಂಬಗಳ ಕೆತ್ತನೆಯ ವಿಷಯವಾಗಿದೆ. ಇಲ್ಲಿರುವ ಶಿಲ್ಪಗಳು ಪುನರಾವರ್ತಿಸಿದೆ ಎಂದೊಮ್ಮೆ ಅನಿಸಿದರೂ, ಸೂಕ್ಷ್ಮವಾಗಿ ಗಮನಿಸಿದಾಗ ಅದರಲ್ಲಿ ಸ್ವಲ್ಪ ಮಟ್ಟಿಗಾದರೂ ವ್ಯತ್ಯಾಸ ಕಾಣುತ್ತಿತ್ತು . ಇದಕ್ಕೆ ಕಾರಣ ಶಿಲ್ಪಿಯ ಶಿಲ್ಪಶಾಸ್ತ್ರವಲ್ಲದೆ ಆತನ ಕಲ್ಪನಾಶಕ್ತಿಗೆ ಅನುಗುಣವಾಗಿ ಶಿಲ್ಪವು ಮೂಡಿಬಂದಿದೆ. ಮುಂದೆ ಪ್ರವೇಶ ದ್ವಾರದಲ್ಲಿರುವ ವ್ಯಾಳಿಗಳು, ದೇವಸ್ಥಾನಕ್ಕೆ ಕಾವಲಾಗಿ ನಿಂತಿದೆ ಎಂಬ ನಂಬಿಕೆ ಇದೆ.







ವಿಷ್ಣುವಿನ ಮತ್ಸ್ಯಾವತಾರ, ನರಸಿಂಹಾವತಾರದ ಪ್ರಸಂಗಗಳು, ರಾಮಾವತಾರ, ಅಲ್ಲಲ್ಲಿ ಕಂಡು ಬಂದರೆ ಕೃಷ್ಣನ ಅವತಾರದಲ್ಲಿ ಅವನ ಲೀಲೆಗಳು ಅಂದರೆ ಗೋವರ್ಧನ ಗಿರಿಯನ್ನು ಎತ್ತಿರುವುದು, ಬೆಣ್ಣೆಕೃಷ್ಣ/ಅಂಬೆಗಾಲು ಕೃಷ್ಣ, ಕಾಳಿಂಗಮರ್ದನ, ರಾಸನೃತ್ಯ ಮುಂತಾದ ಕೃಷ್ಣಕಥೆಗಳನ್ನು ಒಂದೇ ಕಂಬದಲ್ಲಿ ವರ್ಣಿಸಿದ್ದಾರೆ.











ದೇವಾಲಯದ ದಕ್ಷಿಣ ದಿಕ್ಕಿನ ಬಿತ್ತಿಯಲ್ಲಿ ನವ ನಾಥರಲ್ಲಿ ಅತ್ಯಂತ ಪ್ರಸಿದ್ಧರಾದ ಮತ್ಸ್ಯೇಂದ್ರನಾಥ ಮತ್ತು ಅವರ ಶಿಷ್ಯ ಗೋರಕ್ಷನಾಥರ ಶಿಲ್ಪವಿದೆ. ಅವರು ಹಠ ಯೋಗದ ಸ್ಥಾಪಕರು ಎಂದು ಹೇಳಲಾಗುತ್ತದೆ. ಸೋಮೇಶ್ವರ ದೇವಾಲಯದಲ್ಲಿ ಎಲ್ಲಾ ಒಂಬತ್ತು ನಾಥರ ಶಿಲ್ಪವಿರುವುದು ಬಹಳ ಅಪರೂಪದ ಸಂಗತಿ.



ದೇವಸ್ಥಾನದ ಹೊರ ಪ್ರಾಂಗಣದಲ್ಲಿ ಶಿವ ಪಾರ್ವತಿಯರ ಕಲ್ಯಾಣೋತ್ಸವದ ದೃಶ್ಯ ಕಾಣಬಹುದಾಗಿದೆ. ಅದರಲ್ಲಿ ಪಾಲ್ಗೊಂಡ ವಿಷ್ಣು, ಬ್ರಹ್ಮ, ವಿಶ್ವಕರ್ಮ, ಇಂದ್ರಾದಿದೇವತೆಗಳು, ಸಪ್ತಮಾತೃಕೆಯರು, ಸಪ್ತಋಷಿಗಳು, ಅಷ್ಟದಿಕ್ಪಾಲಕರನ್ನೂ ನೋಡಬಹುದು. ಇದನ್ನು ಕಂಡ ಎಂಥವರಿಗೂ ಧನ್ಯತಾ ಭಾವನೆ ಉಂಟಾಗದಿರದು.



ದೇವಾಲಯದ ಪಶ್ಚಿಮ ದಿಕ್ಕಿನಲ್ಲಿ ಗರುಡ ವಾಹನ ವಿಷ್ಣು, ಹಂಸ ವಾಹನ ಬ್ರಹ್ಮ ಮತ್ತು ಪುಷ್ಪಕವಿಮಾನದಲ್ಲಿ ಭಗವಾನ್ ವಿಶ್ವಕರ್ಮರ ಜೊತೆಗೂಡಿ ನವದಂಪತಿಗಳಾದ ಶಿವಪಾರ್ವತಿಯರು, ನಂದಿಯ ಮೇಲೆ ಕುಳಿತು, ಉತ್ಸವದಲ್ಲಿ ತೆರಳುವುದು ನಯನ ಮನೋಹರವಾದ ದೃಶ್ಯ.




ನವದಂಪತಿಗಳಾದ ಶಿವಪಾರ್ವತಿಯರು ಉತ್ಸವದ ನಂತರ ಸಭೆಯಲ್ಲಿ ಸಕಲದೇವತೆಗಳೊಡಗೂಡಿ ವಾದ್ಯ ವೃಂದದಿಂದ ಕೂಡಿದ ನೃತ್ಯ ಪ್ರದರ್ಶನವನ್ನು ವೀಕ್ಷಿಸುವ ಸಂದರ್ಭವನ್ನು ಕಾಣಬಹುದಾಗಿದೆ.



ನಂತರ ಗೋಪುರದಲ್ಲಿ ನೃತ್ಯಾದಿದೇವತೆಯಾದ ನಟರಾಜನು ವಾದ್ಯ ವೃಂದದೊಡನೆ ನರ್ತಿಸುತ್ತಿರುವ ಶಿಲ್ಪ ನರ್ತಕರ ಗಮನ ಸೆಳೆಯುತ್ತದೆ. ಈ ದೃಶ್ಯವನ್ನು ನೋಡಿದಾಗ ತಿರುವಿಳಯಾಡಲ್ ಪುರಾಣದ ಮಧುರೈ ಖಂಡದ 5ನೇ ಹಾಗು 6ನೇ ಅಧ್ಯಾಯದಲ್ಲಿ ಬರುವ ಕಥೆ, ಅಂದರೆ ಶಿವ ಪಾರ್ವತಿಯರ ಮದುವೆಯ ಸಂಭ್ರಮದ ನಂತರ ಶಿವನು ತನ್ನ ಭಕ್ತರಾದ ವ್ಯಾಘ್ರಪಾದ ಹಾಗೂ ಪತಂಜಲಿಯರ ಭಕ್ತಿಯನ್ನು ಮೆಚ್ಚಿ ಅಪಸ್ಮಾರನ ಮೇಲೆ ನಿಂತು ನರ್ತಿಸುವ ಉಲ್ಲೇಖ ನೆನಪಾಗುತ್ತದೆ. ಇಲ್ಲಿ ಮಹಾ ತಾಂಡವ ನಟನಿಗೆ ವಾದ್ಯ ವೃಂದದಲ್ಲಿ ನಾರಾಯಣನು ಹುಡುಕ್ಕವನ್ನು, ಬ್ರಹ್ಮನು ತಾಳವನ್ನು, ನಂದಿಯು ಮೃದಂಗ ಹಾಗೂ ಸರಸ್ವತಿಯು ವೀಣೆಯಲ್ಲಿ ಸಹಕಾರ ನೀಡಿರುವ ಶಿಲ್ಪಗಳು ಕಣ್ಮನಗಳಿಗೆ ಮುದ ನೀಡುತ್ತದೆ.

ಶಿವನ ಮೇಲಿರುವ ದೊಡ್ಡ ಕೋರೆಹಲ್ಲುಗಳುಳ್ಳ ದೈತ್ಯಾಕಾರದ ಮುಖವಿರುವ ರಾಕ್ಷಸ ಕೀರ್ತಿಮುಖನ ಕಥೆ ಕೂಡ ಬಹಳ ಸ್ವಾರಸ್ಯಕರವಾಗಿದೆ. ಅಸುರರ ರಾಜ ಜಲಂಧರ ರಾಕ್ಷಸರ ಗುರು ಶುಕ್ರಾಚಾರ್ಯರ ಪರಮ ಶಿಷ್ಯ. ಶಿವನ ತಲೆಯ ಮೇಲಿರುವ ಚಂದ್ರನನ್ನು ಕಿತ್ತು ತರುವಂತೆ ರಾಹುವಿಗೆ ಆದೇಶಿಸುತ್ತಾನೆ. ಚಂದ್ರನನ್ನು ಕಿತ್ತುಕೊಳ್ಳುವ ಅವಸರದಲ್ಲಿ ಶಿವನ

copyrighted

ಧ್ಯಾನಕ್ಕೆ ಭಂಗವುಂಟುಮಾಡುತ್ತಾನೆ. ಇದರಿಂದ ಕುಪಿತನಾದ ಶಿವನು ತನ್ನ ಮೂರನೇ ಕಣ್ಣಿನ ಅಗ್ನಿಜ್ವಾಲೆಗಳಿಂದ ಹುಟ್ಟಿದ ಸಿಂಹಮುಖಿ ಎಂಬ ರಕ್ಕಸನಿಗೆ ರಾಹುವನ್ನು ನುಂಗಿಹಾಕುವಂತೆ ಆದೇಶಿಸುತ್ತಾನೆ. ರಾಹುವಿನ ಕ್ಷಮಾಯಾಚನೆಯಿಂದ ಶಿವನು ಸಮಾಧಾನಗೊಂಡು ಆತನನ್ನು ಬಿಟ್ಟುಬಿಡುವಂತೆ ಸಿಂಹಮುಖಿಗೆ ಹೇಳುತ್ತಾನೆ.

ಹಸಿವಿನಿಂದ ಬಳಲುತ್ತಿದ್ದ ಅವನು ಶಿವನ ಆಜ್ಞೆಯಂತೆ ತನ್ನನ್ನೇ ತಾನುಭೋಜನವಾಗಿ ತಿಂದು ಮುಗಿಸಿದನಂತೆ . ಶಿವನು ಸಾಕು ನಿಲ್ಲಿಸು ಎನ್ನುವಷ್ಟರಲ್ಲಿ ರಕ್ಕಸನ ಮುಖ ಮಾತ್ರ ಉಳಿದಿತ್ತು. ಆ ಸಿಂಹಮುಖಿ ತಿನ್ನದೇ ಉಳಿಸಿದ ಆತನದ್ದೇ ಮುಖಕ್ಕೆ ಪರಶಿವ, ಕೀರ್ತಿಮುಖ ಅನ್ನೋ ಬಿರುದನ್ನು ನೀಡಿ ದೇಗುಲಗಳಲ್ಲಿ ಕೀರ್ತಿಮುಖವಾಗಿ ವಿರಾಜಿಸು ಎಂದು ಆಶೀರ್ವದಿಸಿದನಂತೆ. ಒಟ್ಟಿನಲ್ಲಿ ಮನುಷ್ಯನು ತನ್ನೊಳಗಿರುವ ಅಹಂಕಾರವನ್ನು ತ್ಯಜಿಸಿದರಷ್ಟೇ ಜೀವನದಲ್ಲಿ ಸಾರ್ಥಕತೆಯನ್ನು ಹೊಂದಬಹುದು ಎಂಬುದು ಈ ಕೀರ್ತಿಮುಖನ ಕಥೆಯ ಸಾರ ಮತ್ತು ರಹಸ್ಯ.

ಹೀಗೇ ಇನ್ನು ಹತ್ತು ಹಲವಾರು ಕಥೆ ಹೇಳುವ ಶಿಲ್ಪಗಳನ್ನು ಹೊಂದಿರುವ ದೇವಾಲಯಗಳು ವಾಸ್ತುಶಿಲ್ಪದ ಮೂಲಕ ಆಧ್ಯಾತ್ಮಿಕ ವಿಷಯಗಳನ್ನು ಅಭಿವ್ಯಕ್ತಪಡಿಸುತ್ತದೆ. ದೇವಾಲಯಗಳು ದೇವರ ವಾಸಸ್ಥಾನವಷ್ಟೇ ಅಲ್ಲ, ಅವು ಜ್ಞಾನ, ಕಲೆ, ವಾಸ್ತುಶಿಲ್ಪ ಮತ್ತು ಸಂಸ್ಕೃತಿಯ ತೊಟ್ಟಿಲುಗಳಾಗಿವೆ.

ಇವು ನಮ್ಮ ರಾಷ್ಟ್ರದ ಹೆಮ್ಮೆಕೂಡ. ಇವುಗಳ ಸಂರಕ್ಷಣೆಯು ಸರ್ಕಾರದ ಅಥವಾ ಯಾವುದೇ ನಿರ್ದಿಷ್ಟ ಸರ್ಕಾರಿ ಸಂಸ್ಥೆಯ ಏಕೈಕ ಜವಾಬ್ದಾರಿಯಷ್ಟೇ ಆಗಿರದೆ ನಮ್ಮ ನಿಮ್ಮೆಲ್ಲರ ಜವಾಬ್ದಾರಿ ಕೂಡ ಆಗಿದೆ.

Reference :


1 Interview with Smt Gayathri Shilpi, Sculptor, Gulbarga.
2 Book Reference : Divine Games of Lord Shiva Thiruvilayadal Puranam by Paranjothy Munivar rendered in English by S Ponnuswamy
3 Photo Courtesy : Smt. Divya Prasad, Sri. Vishwanatha, Sri. Vishnu Prasad
4 https://www.deccanherald.com/spectrum/spectrum-top-stories/a-temple-and-its-dancer-who-published-a-book-958779.html
5 Date with history: Someshwara Temple may be just a millennium-old - The Economic Times (indiatimes.com)

* * * * *

copyright protected

**ನೂಪುರ ಭ್ರಮರಿ (ರಿ.) IKS Centre– ನೃತ್ಯಶಿಲ್ಪಯಾತ್ರೆಯ ಅಂಗಭಾಗವಾದ ಲೇಖನವಾಗಿ ಪ್ರಕಟವಾಗಿದೆ.**
**ಮೇ- ಜೂನ್ 2022**

ಲೇಖಿಕೆಯ ಪರಿಚಯ :



ಭರತನಾಟ್ಯದಲ್ಲಿ ಅಪಾರ ಆಸಕ್ತಿ ಹೊಂದಿರುವ ಶ್ರೀಮತಿ ರೋಹಿಣಿ ಮಂಜುನಾಥ್ ಚಿಕ್ಕಂದಿನಿಂದಲೇ ಗುರು ಡಾ. ಹೇಮಾ ಗೋವಿಂದರಾಜನ್ ಬಳಿ ನೃತ್ಯಾಭ್ಯಾಸವನ್ನು ಪ್ರಾರಂಭಿಸಿ ಅವರ ಸಮರ್ಥ ಮಾರ್ಗದರ್ಶನದಲ್ಲಿ ಭರತನಾಟ್ಯ ಜೂನಿಯರ್ ಮತ್ತು ಸೀನಿಯರ್ ನೃತ್ಯ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿ ತಮ್ಮ 15ನೇ ವಯಸ್ಸಿನಲ್ಲಿಯೇ ರಂಗಪ್ರವೇಶವನ್ನು ಪೂರೈಸಿದ್ದಾರೆ. ನಂತರ ಕರ್ನಾಟಕ ಕಲಾಶ್ರೀ, ಶಾಂತಲಾ ಪ್ರಶಸ್ತಿ ಪುರಸ್ಕೃತ ಗುರು ಬಿ. ಭಾನುಮತಿ ಅವರ ಬಳಿ ಭರತನಾಟ್ಯದಲ್ಲಿ ಹೆಚ್ಚಿನ ತರಬೇತಿಯನ್ನು ಪಡೆದು ಪ್ರಸ್ತುತ ಗುರು ಶ್ರೀಮತಿ ಶೀಲಾ ಚಂದ್ರಶೇಖರ್ ಅವರ ಮಾರ್ಗದರ್ಶನದಲ್ಲಿ ಅಭಿನಯ ಮತ್ತು ಶಾಸ್ತ್ರದ ಅಂಶಗಳಲ್ಲಿ ತರಬೇತಿಯನ್ನು ಪಡೆಯುತ್ತಾ ತಮ್ಮ ನೃತ್ಯ ಪಯಣವನ್ನು ಮುಂದುವರೆಸಿದ್ದಾರೆ. ಬಿ.ಕಾಂ ಪದವಿಯ ನಂತರ ಚಿದಂಬರಂನ ಅಣ್ಣಾಮಲೈ ವಿಶ್ವವಿದ್ಯಾನಿಲಯದಿಂದ ಭರತನಾಟ್ಯದಲ್ಲಿ ಮಾಸ್ಟರ್ ಆಫ್ ಫೈನ್ ಆರ್ಟ್ಸ್ ಪದವಿಯನ್ನು ಪಡೆದಿದ್ದಾರೆ.

ಬೆಂಗಳೂರಿನಲ್ಲಿ ತಮ್ಮದೇ ನೃತ್ಯ ಶಾಲೆಯಲ್ಲಿ ಹಲವಾರು ಪ್ರತಿಭಾವಂತ ಯುವ ಕಲಾವಿದರಿಗೆ ಭರತನಾಟ್ಯ ತರಬೇತಿಯನ್ನು ಸಹಾ ನೀಡುತ್ತಿದ್ದಾರೆ. ಇವರು ಗುರು ವಿದುಷಿ ಎಚ್ ಗೀತಾ ಅವರ ಹಿರಿಯ ವಿದ್ಯಾರ್ಥಿನಿಯಾಗಿ ಶಾಸ್ತ್ರೀಯ ಸಂಗೀತವನ್ನು ಅಭ್ಯಾಸಮಾಡುತಿದ್ದಾರೆ. ವಿದ್ವಾನ್ ಎನ್ ನಾರಾಯಣಸ್ವಾಮಿ ಅವರ ಬಳಿ ನಟ್ಟುವಾಂಗ ಅಭ್ಯಾಸ ಮಾಡುತಿದ್ದಾರೆ. ಹಲವು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ವೇದಿಕೆಗಳಲ್ಲಿ ಇವರು ಭರತನಾಟ್ಯ ಪ್ರದರ್ಶನವನ್ನು ನೀಡಿದ್ದಾರೆ. ಪ್ರಸ್ತುತ ಇವರು ನೂಪುರಭ್ರಮರಿ ಸಂಸ್ಥೆಯ 'ನೃತ್ಯಶಿಲ್ಪಯಾತ್ರೆ' ಅಧ್ಯಯನ ತರಬೇತಿಯನ್ನು (ಇಂಟರ್ನ್ ಶಿಪ್) ಪಡೆಯುತ್ತಿದ್ದಾರೆ.

---

copyright protected